ಪ್ರತಿಬಿಂಬ

PRATIBIMBA – Multidisciplinary Kannada Research Journal of IIMRD
ISSN: 2582-2284
Vol-2 Issue 6, MAY-JUNE 2021, 72-82
©IIMRD, Mysuru
IIMRD JOURNALS
www.iimrd.com

# ಶರಣ ಕೆಂಭಾವಿಯ ಚಂದಿಮರಸ

ಡಾ. ರಾಮರೆಡ್ಡಿ ಎಸ್. ರಡ್ಡೇರ[1]

**ಪೀಠಿಕೆ**

ವೀರಶೈವ ಶಿವಶರಣರ ಸಾತ್ವಿಕವಾದ ಬದುಕಿಗೆ ಮಾರುಹೋಗಿ ಇತರ ಧರ್ಮಿಯರೂ ಕೂಡಾ ವೀರಶೈವ ದೀಕ್ಷೆಯನ್ನು ಪಡೆದ ಮಹತ್ವಪೂರ್ಣವಾದ ಸಂಗತಿಯು ಬಸವಪೂರ್ವಯುಗದಲ್ಲಿ ಕಂಡುಬರುತ್ತದೆ. ಇದಕ್ಕೆ ಕೆಂಭಾವಿಯ ದೊರೆ ಚಂದಿಮರಸನ ಜೀವನೇತಿಹಾಸವು ಸ್ಪಷ್ಟವಾದ ನಿದರ್ಶನವಾಗಿದೆ.

ಚಂದಿಮರಸನ ಜೀವನೇತಿಹಾಸವನ್ನು ಪ್ರತ್ಯೇಕವಾಗಿ ನಿರೂಪಿಸುವ ಯಾವ ಕೃತಿಗಳೂ ಕಂಡುಬರುವುದಿಲ್ಲ. ಕೆಂಭಾವಿ ಭೋಗಣ್ಣನ ಚರಿತ್ರೆಯೊಂದಿಗೆ ಕಾವ್ಯಗಳಲ್ಲಿ ಈತನ ಚರಿತ್ರೆಯು ಹೆಣೆದುಕೊಂಡು ಬಂದಿರುವುದು ಕಂಡುಬರುತ್ತದೆ. ಹೀಗಾಗಿ ಕೆಂಭಾವಿ ಬೋಗಣ್ಣನ ಚರಿತ್ರೆಯನ್ನು ನಿರೂಪಿಸುವ ಹರಿಹರನ 'ಕೆಂಭಾವಿ ಭೋಗಣ್ಣನ ರಗಳೆ', ಶಾಂತಲಿಂಗದೇಶಿಕನ 'ಭೈರವೇಶ್ವರ ಕಾವ್ಯದ ಕಥಾಮಣಿಸೂತ್ರರತ್ನಾಕರ', ಉತ್ತರದೇಶದ ಬಸವಲಿಂಗಕವಿಯ 'ಬಸವೇಶ್ವರ ಪುರಾಣದ ಕಥಾಸಾಗರ', ವೀರಭದ್ರ ಕವಿಯ 'ಅರವತ್ತು ಮೂವರು ಪುರಾತನರ ಪುರಾಣ', ಚೆನ್ನಯ್ಯ ಕವಿಯ 'ಕೆಂಭಾವಿ ಭೋಗಣ್ಣನ ಸಾಂಗತ್ಯ' ಮುಂತಾದ ವೀರಶೈವ ಕಾವ್ಯಗಳಲ್ಲಿ[1] ಚಂದಿಮರಸನ ಉಲ್ಲೇಖವು ಸಾಂದರ್ಭಿಕವಾಗಿ ಕಂಡುಬರುತ್ತದೆ. ಅಂತೆಯೇ ಲಿಂ.ಫ.ಗು.ಹಳಕಟ್ಟಿಯವರ 'ಅಮರಗಣಾಧೀಶ್ವರರ ಚರಿತ್ರೆಗಳು' ಮತ್ತು 'ಶಿವಶರಣರ ಚರಿತ್ರೆಗಳು ಭಾಗ–1'ರಲ್ಲಿನ 'ಕೆಂಭಾವಿ ಭೋಗಣ್ಣನ ಚರಿತ್ರೆ'[2]ಯಲ್ಲಿ, ಡಾ. ಸಿ. ನಾಗಭೂಷಣರ 'ಕೆಂಭಾವಿ ಭೋಗಣ್ಣ' ಕೃತಿಯಲ್ಲಿ[3], ಶಾಂತರಸರ 'ಬಸವಪೂರ್ವಯುಗದ ಶರಣರು' ಕೃತಿಯಲ್ಲಿನ 'ಜಾತಿಮಲಿನತೆಯನ್ನು ತೊಳೆದ ಕೆಂಭಾವಿ ಭೋಗಣ್ಣ'[4] ಎಂಬ ಭಾಗದಲ್ಲಿ– ಈ ಮುಂತಾದ ಕೃತಿಗಳಲ್ಲಿ ಕೆಂಭಾವಿ ಭೋಗಣ್ಣನೊಂದಿಗೆ ಚಂದಿಮರಸನ ಪ್ರಸ್ತಾಪವು ಸಾಂದರ್ಭಿಕವಾಗಿ ಬಂದಿದೆ. ಆರ್. ನರಸಿಂಹಾಚಾರ್ಯರ 'ಕರ್ನಾಟಕ ಕವಿಚರಿತೆ ಭಾಗ–1'[5]ರಲ್ಲಿ, 'ವೀರಶೈವ ಸಾಹಿತ್ಯ ಸಮೀಕ್ಷೆ'ಯಲ್ಲಿನ ಜ.ಚ.ನಿ.ಯವರ ಲೇಖನದಲ್ಲಿ[6] ಮತ್ತು ತ.ಸು. ಶಾಮರಾಯರ 'ಶಿವಶರಣ ಕಥಾರತ್ನಕೋಶ'ದಲ್ಲಿ[7] ಚಂದಿಮರಸನ ಸ್ಥಳ–ಕಾಲ–ಜೀವನಕ್ಕೆ ಸಂಬಂಧಿಸಿದಂತೆ ಪ್ರತ್ಯೇಕವಾದ ಸಂಕ್ಷಿಪ್ತ ವಿವರವು ಕಂಡುಬರುತ್ತದೆ.

---

*[1] ಸಹ ಪ್ರಾಧ್ಯಾಪಕರು, ಆರ್.ಟಿ.ಇ.ಎಸ್. ಕಲಾ, ವಾಣಿಜ್ಯ ಮತ್ತು ವಿಜ್ಞಾನ ಪದವಿ ಮಹಾವಿದ್ಯಾಲಯ, ರಾಣೇಬೆನ್ನೂರು. ಹಾವೇರಿ ಜಿಲ್ಲೆ.*

**ಜೀವನೇತಿಹಾಸ**

ಚಂದಿಮರಸನ ಜೀವನೇತಿಹಾಸಕ್ಕೆ ಸಂಬಂಧಿಸಿದ ವಿವರವು ಸ್ಪಷ್ಟ ಮತ್ತು ಆದ್ಯಂತವಾಗಿ ಎಲ್ಲಿಯೂ ನಿರೂಪಿತವಾಗಿಲ್ಲ. ಉಪಲಬ್ಧ ಆಧಾರಗಳಿಂದ ಈತನ ಜೀವನಕ್ಕೆ ಸಂಬಂಧಿಸಿದ ವಿವರವನ್ನು ಸಂಗ್ರಹಿಸಬಹುದಾಗಿದೆ.

ಚಂದಿಮರಸನು ಕೆಂಭಾವಿಯ ಅರಸನಾಗಿದ್ದನು. ಈತನು ಪೂರ್ವಾಶ್ರಮದಲ್ಲಿ ವಿಪ್ರಮತಾವಲಂಬಿಯಾಗಿದ್ದನು. ಕೆಂಭಾವಿ ಭೋಗಣ್ಣನು ಶ್ವಪಚವೇಷದ ಜಂಗಮನೋರ್ವನನ್ನು ಮನೆಯಲ್ಲಿ ಕರೆದು ಜಂಗಮಾರ್ಚನೆ ಮಾಡಿದುದನ್ನು ನೋಡಿ ಕುಪಿತರಾದ ಊರ ವಿಪ್ರರು ಚಂದಿಮರಸನಲ್ಲಿಗೆ ಹೋಗಿ ದೂರು ನೀಡುತ್ತಾರೆ. ಅರಸನು ಭೋಗಣ್ಣನನ್ನು ಆಸ್ಥಾನಕ್ಕೆ ಕರೆಸಿ ವಿಚಾರಿಸುತ್ತಾನೆ. ಅಲ್ಲದೆ ಭೋಗಣ್ಣನನ್ನು ಊರು ಬಿಟ್ಟು ಹೋಗುವಂತೆ ಅಜ್ಞಾಪಿಸುತ್ತಾನೆ. ಭೋಗಣ್ಣನು ಚಂದಿಮರಸನಾಜ್ಞೆಯಂತೆ ಊರು ಬಿಟ್ಟು ಹೋಗುತ್ತಾನೆ. ಕೆಂಭಾವಿಯ ಶಿವಾಲಯಗಳಲ್ಲಿನ ಲಿಂಗಗಳೆಲ್ಲವೂ ಭೋಗಣ್ಣನ ಹಿಂದೆ ಹೋಗುತ್ತವೆ. ಭೋಗಣ್ಣನ ಈ ಅದ್ಭುತವಾದ ಶಿವಭಕ್ತಿಮಹಿಮೆಯಿಂದ ಪರಿವರ್ತಿತನಾದ ಚಂದಿಮರಸನು ಅರಸೊತ್ತಿಗೆಯನ್ನು ಮಗನಿಗೆ ವಹಿಸಿಕೊಟ್ಟು, ಶಿಮ್ಮಲಿಗೆ ಹೋಗಿ ಅಲ್ಲಿನ ನಿಜಗುಣರೆಂಬ ಶರಣರಿಂದ ವೀರಶೈವದೀಕ್ಷೆಯನ್ನು ಪಡೆದುಕೊಂಡು ಶಿವಶರಣನಾಗಿ ಬಾಳುತ್ತಾನೆ. 'ಶಿಮ್ಮಲಗಿಯ ಚೆನ್ನರಾಮ' ಅಂಕಿತದಿಂದ ಚಂದಿಮರಸನು ವಚನಗಳನ್ನು ರಚಿಸಿದ್ದಾನೆ.

ಚಂದಿಮರಸನು ದೇವರ ದಾಸಿಮಯ್ಯನ ಪ್ರಭಾವಕ್ಕೆ ಒಳಗಾಗಿದ್ದನೆಂದೂ, ಈತನು ಪ್ರಸಾದಿಯೂ, ಪ್ರಸಾದ ಕಟ್ಟಳೆಯಲ್ಲಿ ಪರಿಣತನೂ, ವೇದಶಾಸ್ತ್ರಗಳನ್ನು ಬಲ್ಲಿದವನೂ ಆಗಿದ್ದನೆಂದು ಜ.ಚ.ನಿ.ಯವರು ಅಭಿಪ್ರಾಯಪಟ್ಟಿದ್ದಾರೆ.[8]


**ಸ್ಥಳ–ಕಾಲ**

ಚಂದಿರಸನನ್ನು ಉಲ್ಲೇಖಿಸುವ ಕಾವ್ಯಗಳೆಲ್ಲವೂ ಈತನು ಕೆಂಭಾವಿಯ ಅರಸನಾಗಿದ್ದನೆಂದು ಒಮ್ಮತದಿಂದ ಉಲ್ಲೇಖಿಸಿರುವುದರಿಂದ ಚಂದಿಮರಸನ ಸ್ಥಳ 'ಕೆಂಭಾವಿ' ಎಂಬುದು ಖಚಿತವೆನಿಸುತ್ತದೆ. ಇದು ಇಂದಿನ ಯಾದಗಿಡು ಜಿಲ್ಲೆಯ ಸುರಪುರ ತಾಲೂಕಿನಲ್ಲಿದ್ದು, ಹಿಂದೆ ಸಗರನಾಡಿನ ಒಂದು ಆಡಳಿತ ಉಪವಿಭಾಗವಾದ 'ಕೆಂಭಾವಿ–24'ರ ರಾಜಧಾನಿಯಾಗಿತ್ತು.

ಚಂದಿಮರಸನನ್ನು 'ಸಿಮ್ಮಲಿಗೆಯ ಚೆನ್ನಯ್ಯ'ನೆಂದು ಹೆಸರಿಸಿರುವ ಕವಿಚರಿತೆಕಾರರು ಈತನ ಕಾಲ ಸು.1160 ಎಂದು ಊಹಿಸಿ[9]ದ್ದಲ್ಲದೆ, ಈತನು ಭೋಗಣ್ಣನ ಸಮಕಾಲೀನನೆಂದು ಹೇಳಿದ್ದಾರೆ.[10] ಶ್ರೀಯುತ ಜ.ಚ.ನಿ.ಯವರು ಈತನು ದೇವರ ದಾಸಿಮಯ್ಯನ ಪ್ರಭಾವಕ್ಕೆ ಒಳಗಾಗಿದ್ದನೆಂದು ಹೇಳುತ್ತಾರೆ.[11] ಕಾವ್ಯಗಳಲ್ಲಿಯೂ ಕೂಡಾ ಭೋಗಣ್ಣನ ಚರಿತ್ರೆಯೊಂದಿಗೆ ಚಂದಿಮರಸನ ಪ್ರಸ್ತಾಪ

ಬರುವುದರಿಂದ ಮತ್ತು ದೇವರ ದಾಸಿಮಯ್ಯನ ವಚನದಲ್ಲಿ ಕೆಂಭಾವಿ ಭೋಗಣ್ಣನ ಉಲ್ಲೇಖವಿರುವುದರಿಂದ ಚಂದಿಮರಸನು ದೇವರ ದಾಸಿಮಯ್ಯ ಮತ್ತು ಕೆಂಭಾವಿ ಭೋಗಣ್ಣರ ಸಮಕಾಲೀನನಾಗಿದ್ದನೆಂದು ಸ್ಥೂಲವಾಗಿ ಹೇಳಬಹುದು.

ಕ್ರಿ.ಶ.1054ರ ಕೆಂಭಾವಿ ಶಾಸನ[12]ವು ಸ್ಥಳೀಯ ಮಾಂಡಳಿಕ ಅರಸುಮನೆತನವಾದ ಹೈಹಯ ದೊರೆಗಳ ವಂಶವನ್ನು ವರ್ಣಿಸಿದ್ದು, ಆ ವಂಶವೃಕ್ಷ ಇಂತಿದೆ:




ಈ ವಂಶವೃಕ್ಷದಲ್ಲಿನ ಇಮ್ಮಡಿ ಚಂದಭೂಪಾಳನೇ ಶಿವಶರಣ ಚಂದಿಮರಸನಾಗಿರುವಂತೆ ತೋರುತ್ತದೆ. ಹೈಹಯ ವಂಶದವರ ವಂಶಾವಳಿಯನ್ನು ವರ್ಣಿಸುವ ಸಗರನಾಡಿನ ಕೆಲವು ಶಾಸನಗಳಲ್ಲಿ ಇಮ್ಮಡಿ ಚಂದಭೂಪಾಲನು ಚಂದಭೂಪಾಳ,[14] ಚನ್ದಭೂಪ,[15] ಚೌಂಡರಾಯ,[16] ಚನ್ದರಸ,[17] ಚಂದಿಮಯ್ಯ[18] ಎಂಬಿತ್ಯಾದಿಯಾಗಿ ಉಲ್ಲೇಖಗೊಂಡಿದ್ದು, ಈತನು ಒಬ್ಬ ಶ್ರೇಷ್ಠ ಶಿವಭಕ್ತನಾಗಿದ್ದನೆಂದು ಬಂದರವಾಡ ಶಾಸನವು ವರ್ಣಿಸುತ್ತದೆ. "ಪ್ರಿಯವಾಕ್ಯಂ ಚಂದಿಮಯ್ಯಂ ಜನಕನನುಪಮಾಜಾತಾಯ್ವಬಯಕ್ಕಂ ಜಯಕರ್ಣ್ನಂ ಸ್ವಾಮಿ ಮಹೇಶ್ವರೇ ಕೆಳೆಯರಾತಪ್ಪದೈವಂ ಶಿವಂ ನನ್ನಿಯ ವಾಕ್ಯಂ ಕಾಸ್ಯಪಗೋತ್ರದೊಳೆನೆ ಧರೆಗೆಸೆದ ಧನ್ಯನೆಂ"[19] ಎಂಬ ಬಂದರವಾಡ ಶಾಸನದ ವರ್ಣನೆಯಲ್ಲಿ ಚಂದಿಮರಸನು ಮೂಲತಃ ಕಾಸ್ಯಪಗೋತ್ರದ ವೈದಿಕನಾಗಿದ್ದು, ಶರಣರ(ಸ್ವಾಮಿ ಮಹೇಶ್ವರರ) ಸಹವಾಸದಿಂದ ಶಿವಭಕ್ತನಾದನೆಂದು ವರ್ಣಿಸಿದೆ. ಕ್ರಿ.ಶ1095ರ ಯಡ್ರಾಮಿ ಶಾಸನದಲ್ಲಿ "ಕೇವಳಮಲ್ತು ಶಂಭು ಸದ್ ಭಕ್ತಿಯದೆಂತೆನೆ

ಚೌಂಡರಾನೆಂಬಾವಿಭುವಿಂಗಿರುಳ್ಕನಸಿನೊಳ್ ಯತಿರೂಪದೇ ಬಂದು ನಿಂದು ಕೆಂಭಾವಿಯ ಬಟ್ಟೆಯೆಡೆಯಿಂದ ಬಾವಿಯ ಪುತ್ತಿನಲ್ಲಿ ನೀಂ ಭಾವಿಸಿ ತೋಡಿ ನೋಡು ಗಡ ಕಾಣ್ಬನ್ನಗಳ ಸ್ವಯಂಭುಮಂ ಕಣ್ಡು ಸ್ವಯಂಭುವೆಂದಜೆದಾರೋಗಿಸಿ ಮಜ್ಜಿದೇಳ್ವಂ ನಿಧಾನಮಂ ಕಣ್ಡವೋಲರ್ತ್ಥಿಯಿಂ ನಲಿದು ಪೀಠಮನಿಕ್ಕಿಸಿ ದೇಗುಲಕ್ಕೆ ಮುಂ ಕೋಣ್ಡದನೆಯ್ದೆ ತನ್ನನ್ನೋೀಳಳಕಕಿಲ್ಲದೆ ಮಾಡಿಸಿದಂ ಬಬಾಪ್ಪುಚಾಮುಣ್ಡನಶೇಷ ಸದ್ಗುಣಕರಣ್ಡನಿದೇಂ ಕ್ರಿತಕೃತ್ಯನಾದನೋ॥"[20] ಎಂಬ ವರ್ಣನೆಯಿದೆ. 'ಶಿವನ ಸದ್ಭಕ್ತಿಯೆಂಬುದು ಸಾಮಾನ್ಯವಲ್ಲ;ಚೌಂಡರಾಯ(ಚಂದಿಮರಸ)ನೆಂಬ ಭಕ್ತನಿಗೆ ಇರುಳು ಕನಸಿನಲ್ಲಿ ಯತಿರೂಪದಿಂದ ಬಂದ ಶಿವನು ಕೆಂಭಾವಿಯ ದಾರಿಗಿರುವ ಬಾವಿಯ ಹುತ್ತಿನಲ್ಲಿ ತೋಡಿ ನೋಡಲು ಹೇಳಿದ. ಅಲ್ಲಿ ಸ್ವಯಂಭುಲಿಂಗ ಮತ್ತು ಅಪಾರ ಸಂಪತ್ತು ಲಭಿಸಿತು. ಇದರಿಂದ ಉತ್ಸುಕನಾದ ಚಂದಿಮರಸನು ಕೃತಕೃತ್ಯನಾದನು'– ಎಂಬುದು ಇದರ ವಿವರವಾಗುತ್ತದೆ. ಇದು ಚಂದಿಮರಸನ ಒಂದು ಪವಾಡದಂತೆ ಕಂಡುಬರುತ್ತದೆ. ಕ್ರಿ.ಶ.ಸು.12ನೆಯ ಶತಮಾನದ ಯಡ್ರಾಮಿ ಶಾಸನದಲ್ಲಿ "........ಭಿಮಾನಂ ಸ್ವಯಮೆನೆ ನಗಟ್ಟಿಂ ಚನ್ದಭೂಪಂ"[21] ಎಂದಿದೆ. ಕ್ರಿ.ಶ.1067ರ ಮುಡಬೂಳ ಶಾಸನದಲ್ಲಿ "ಶ್ರೀಮತ್ ಚನ್ದರಸರು"[22] ಎಂಬ ಉಲ್ಲೇಖವಿದೆ. ಈ ಎಲ್ಲ ಶಾಸನಗಳಲ್ಲಿನ ಉಲ್ಲೇಖಿತ ಆಧಾರಗಳಿಂದ ಇಮ್ಮಡಿ ಚಂದಭೂಪಾಳನೇ ಶಿವಶರಣ ಚಂದಿಮರಸ ಆಗಿರುವಂತೆ ತೋರುತ್ತದೆ.

ಚಂದಿಮರಸನು ಹೈಹಯ ನಿಂಬನ ಮಗನೂ, ರೇವರಸನ ತಂದೆಯೂ ಆಗಿದ್ದಾನೆ. ರೇವರಸನ ಅನೇಕ ಶಾಸನಗಳು ಸಗರನಾಡಿನಲ್ಲಿ ಉಪಲಬ್ಧವಾಗಿವೆ. ಕ್ರಿ.ಶ.1106ರ ದೇವರಗೋನಾಲ ಶಾಸನ[23]ದಲ್ಲಿ ರೇವರಸನ ಮಗ ಭೋಗದೇವನ ಉಲ್ಲೇಖವಿದೆ. ಈ ಭೋಗದೇವನು ಚಂದಿಮರಸನ ಮೊಮ್ಮಗನಾಗಿದ್ದು, ಚಂದಿಮರಸನ ಕಾಲದಲ್ಲಿ ಇದ್ದ ಶರಣ ಕೆಂಭಾವಿ ಭೋಗಣ್ಣನ ಪ್ರಭಾವವನ್ನು ಸೂಚಿಸುವಂತಿದೆ.

ಮೇಲೆ ಉಲ್ಲೇಖಿಸಿದ ಕ್ರಿ.ಶ.1054ರ ಕೆಂಭಾವಿ ಶಾಸನವು ರೇವರಸನ ಕಾಲದ್ದಾಗಿರುವುದರಿಂದ ಈ ಅವಧಿಗಾಗಲೇ ಚಂದಿಮರಸನು ಅರಸೊತ್ತಿಗೆಯನ್ನು ಮಗನಾದ ರೇವರಸನಿಗೆ ಒಪ್ಪಿಸಿ ಶರಣಜೀವನ ಸಾಗಿಸುತ್ತಿದ್ದಂತೆ ತೋರುತ್ತದೆ. ಒಟ್ಟಿನಲ್ಲಿ ಚಂದಿಮರಸನು ಕ್ರಿ.ಶ.ಸು.1020 ರಿಂದ 1065ರವರೆಗೆ ಜೀವಿಸಿದ್ದನೆಂದು ಹೇಳಬಹುದಾಗಿದೆ.

**ಸಾಹಿತ್ಯ**

ಪೂರ್ವಾಶ್ರಮದಲ್ಲಿ ರಾಜನಾಗಿದ್ದ ಚಂದಿಮರಸನು ಲೌಕಿಕ ಭೋಗೋಪಭೋಗಗಳನ್ನು ಯಥೇಚ್ಛವಾಗಿ ಅನುಭವಿಸಿ, ರಾಜವೃತ್ತಿಗೆ ಅನಿವಾರ್ಯವಾದ ಕ್ರೌರ್ಯ–ಆಕ್ರಮಣಗಳಿಂದ ಸರ್ವಾಧಿಕಾರವನ್ನು ಚಲಾಯಿಸಿ, ಮತೀಯ ಪ್ರಚೋದನೆಗೆ ಸಿಕ್ಕು ವಿಪ್ರವಾದಿಯಾಗಿದ್ದನು. ಶರಣ ಕೆಂಭಾವಿ ಭೋಗಣ್ಣನ ಘಟನೆಯಿಂದ ಮನಃ ಪರಿವರ್ತನೆಗೊಂಡ ಚಂದಿಮರಸನ ಜೀವನದಲ್ಲಿ

ಹೊಸ ತಿರುವು ಉಂಟಾಗುತ್ತದೆ. ಪೂರ್ವಾಶ್ರಮದಲ್ಲಿ ಅನುಭವಿಸಿದ ಭೋಗವು ತ್ಯಾಗವಾಗಿ; ಚಲಾಯಿಸಿದ ಸರ್ವಾಧಿಕಾರ ವೀರಶೈವ ಸದಾಚಾರವಾಗಿ; ಅಳವಡಿಸಿಕೊಂಡಿದ್ದ ವಿಪ್ರಧರ್ಮವು ಶರಣನ ಮನೋಧರ್ಮವಾಗಿ; ವೃತ್ತಿ ಅನುಗುಣವಾಗಿ ಅನುಸರಿಸಿದ ಕ್ರೌರ್ಯ–ಆಕ್ರಮಣಗಳು ಶರಣನ ಭಕ್ತಿ–ಜ್ಞಾನಗಳಾಗಿ ಮಾರ್ಪಡುತ್ತವೆ. ಅವನ ಅನುಭವವೆಲ್ಲ ಅನುಭಾವವಾಗಿ ಸ್ಫುರಿಸುತ್ತದೆ. ಇಂಥ ವಿಶಿಷ್ಟವಾದ ಮನೋಭೂಮಿಕೆಯಿಂದ ಚಂದಿಮರಸನು ವಚನಗಳನ್ನು ರಚಿಸಿದ್ದಾನೆ.

'ಸಿಮ್ಮಲಿಗೆಯ ಚೆನ್ನರಾಮಾ' ಅಂಕಿತ ಚಂದಿಮರಸನ 160 ವಚನಗಳು ಇದುವರೆಗೆ ಉಪಲಬ್ಧವಾಗಿದ್ದು, ಪ್ರಕಟವಾಗಿವೆ.[24] ಇವುಗಳ ಭಾಷೆ ಪ್ರಬುದ್ಧವೂ, ಸುಮಧುರವೂ, ಸುಲಲಿತವೂ ಆಗಿದ್ದು, ಭಾವವನ್ನು ಸಮರ್ಥವಾಗಿ ಸಂವಹನಿಸುವಲ್ಲಿ ಗಮನಾರ್ಹವಾಗಿವೆ. ಅವುಗಳಲ್ಲಿನ "ಉಪನಿಷದ್ವಾಕ್ಯಮಪ್ಪ ಗುರುವಚನವ ಹೃದಯದಲ್ಲಿ ನಂಬದೆ ತಮ್ಮೊಳಿದ್ದ ಹಾಗೆ ಗಳಹುತಿಪ್ಪರಯ್ಯ"[25] ಎಂಬಂಥ ವಚನಾಭಿಪ್ರಾಯಗಳಿಂದ ಚಂದಿಮರಸನು ಉಪನಿಷತ್ ಮುಂತಾದ ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಅಧ್ಯಯನ ಮಾಡಿರುವುದನ್ನು ಸೂಚಿಸುತ್ತದೆ.

ಚಂದಿಮರಸನ ವಚನಗಳಲ್ಲಿ ಕೆಲವು ವಿಶೇಷವಾದ ಅಂಶಗಳನ್ನು ಗುರುತಿಸಬಹುದಾಗಿದೆ. ಅಂಗನೆಯ ಸಂಗದಿಂದ ವಿರಕ್ತಿ, ಭೋಗವಿರಕ್ತಿ, ಚತುರಾಶ್ರಮ–ತ್ರಿಜಗ–ಯುದ್ಧವಿರಕ್ತಿಯಂಥ ಸಮಕಾಲೀನ ಅನುಸರಣೆಗಳ ಅಭಿವ್ಯಕ್ತಿ, ಭವಿ–ಭಕ್ತ–ವಿಚಾರ, ದೇವನ ಒಲುಮೆಯನ್ನು ಹೊಂದುವ ಆತುರಭಾವ, ಗುರು–ಶಿಷ್ಯ ಸಂಬಂಧ, ಲಿಂಗವಂತನ ಆಚಾರ, ಸಾಧಕನ ಸಾತ್ವಿಕತೆ, ಅರಿವು–ಮರೆವು, ಆತ್ಮನ ಸ್ವರೂಪ, ತಾತ್ವಿಕತೆ, ವಿಶಿಷ್ಟಾದ್ವೈತ– ಇವು ಚಂದಿಮರಸನ ವಚನಗಳಲ್ಲಿನ ವಿಶೇಷ ಅಂಶಗಳಾಗಿವೆ.

**ಅಂಗನೆಯ ಸಂಗದಿಂದ ವಿರಕ್ತಿ**

ಹೆಣ್ಣೆಂಬುದು ಒಂದು ಮಾಯೆ. ಆ ಮಾಯೆಯ ಮೋಹಕ್ಕೆ ಸಿಲುಕಿದರೆ ಅದು ಆತ್ಮವನ್ನು ಕಾಣುವ ಪರಾತತ್ವದಿಂದ ಭಕ್ತನನ್ನು ದೂರವಿರಿಸುತ್ತದೆಂಬುದು ಶರಣ ಚಂದಿಮರಸನ ವಿಚಾರವಾಗಿದೆ.

*"ಕಾಳಕೂಟ ಹಾಳಾಹಳ ವಿಷಂಗಳು*
*ಕುಡಿದವರನಲ್ಲದೆ ಮಿಕವರೇನನೂ ಮಾಡಲಮ್ಮವು!*
*ಸ್ತ್ರೀಯೆಂಬ ಕಡುನಂಜು ನೋಡಿದವರ, ನುಡಿಸಿದವರ,*
*ಕೇಳಿದವರ, ಕೂಡಿದವರ, ಗಡಣ ಸಂಗ್ರಮಾತ್ರದಿಂ*
*ಮಡುಹಿ ನರಕದಲ್ಲಿ ಕೆಡಹದೆ ಮಾಣಳು.*
*ದೇವ ದಾನವ ಮಾನವರನಾರೂ ಉಳಿಯಕೀಯಳು!*

*ಆವಂಗೆಯೂ ಗೆಲಬಾರದೀ ಮಾಯೆಯ!*
*ಗೆಲಿದಾತ ನೀನೆ ಸಿಮ್ಮಲಿಗೆಯ ದಾತ ನೀನೆ,*
*ಸಿಮ್ಮಲಿಗೆಯ ಚೆನ್ನರಾಮಾ"*[26]

ಎಂಬ ವಚನದಲ್ಲಿ ಸ್ತ್ರೀಯು ಎಂಥ ಮೋಹಪರವಶಗೊಳಿಸುವ ಮಾಯೆ ಎಂಬುದನ್ನು ನಿರೂಪಿಸಲಾಗಿದೆ. ಸ್ತ್ರೀಯು ಪುರುಷನನ್ನು ಅತಿಯಾಗಿ ಮೆಚ್ಚಿಸಿಕೊಳ್ಳುವ ಭೋಗಲಕ್ಷಿಣಿ. ಇಂತಹ ಭೋಗಕ್ಕೆ ವಶನಾದ ವ್ಯಕ್ತಿಗೆ ಅತ್ಯಾನಂದವನ್ನೀಯುವ ಶಿವಭಕ್ತಿಯ ಸುಳಿವು ಉಂಟಾಗದು. ಏಕೆಂದರೆ ಹೆಣ್ಣೆಂಬ ಮೋಹದ ಮಾಯಾಪಾಶವೇ ಅಂಥದ್ದಾಗಿರುತ್ತದೆಂಬುದು ಚಂದಿಮರಸನ ಅಭಿಪ್ರಾಯವಾಗಿದೆ.

ಜೀವನವೆಂಬುದು ಸುಖದಾಸೆಗಾಗಿ ನಿತ್ಯವೂ ದುಃಖದಾಗರವನ್ನು ಅನುಭವಿಸುವವನ ಬದುಕನ್ನು ಸೂಚಿಸುತ್ತದೆ. ಅಂಗನೆಯನ್ನು ಕಟ್ಟಿಕೊಂಡು ಬಾಳುವ ಸಂಸಾರಿಗೆ ಇದು ಎಂದಿಗೂ ತಪ್ಪದು. ವಿರಕ್ತ ಜೀವನವೇ ಶ್ರೇಷ್ಠ ಮತ್ತು ಪರಮಸುಖಕಾರಿ ಎಂಬ ವಿಚಾರವು ಚಂದಿಮರಸನದಾಗಿದೆ.

*"ಎಲುವು ತೊಗಲು ನರ ಮಾಂಸ ಪುರೀಷ*
*ಶ್ಲೇಷ್ಮ ರಕ್ತ ಶುಕ್ಲ ಕ್ರಿಮಿ ಕೊಕ್ಕರೆ*
*ಜರೆ ಮರಣ ಜಂತು ಹಲವು ರೋಗಂಗಳ ತವರ್ಮನೆ*
*ನೋಡುವಡೆ ಪಾಪದ ಪುಂಜ*
*ಇಂತೀ ಹೆಸಿಕೆಯೊಳಗೆ ಏತರ ಸುಖವನರಸುವೆ?*
*ಈ ಸುಖದಾಸೆಯ ವಿಚಾರಿಸಿ ನೋಡಿದಡೆ*
*ಸಕಲ ದುಃಖದಾಗರ, ನರಕದ ಪಾಕುಳ*
*ಅಂಗನೆಯರಿಂತೆಂದು ತಿಳಿದು*
*ವಿರಕ್ತನಾದ ಪರಮ ಸೌಖ್ಯಾಂಗ ನೀನೇ*
*ಸಿಮ್ಮಲಗಿಯ ಚೆನ್ನರಾಮಾ"*[27]

ಎಂಬ ವಚನದಲ್ಲಿ ಚಂದಿಮರಸನು ವಿರಕ್ತ ಜೀವನವನ್ನು ಕೊಂಡಾಡುತ್ತಾನೆ. ಎಲುವು, ತೊಗಲು, ಮಾಂಸ, ಪುರೀಷ, ಶ್ಲೇಷ್ಮ, ರಕ್ತಾದಿ ಧಾತುಗಳಿಂದ ಕೂಡಿದ ಶರೀರವು ಜರೆ, ಮರಣ ಜಂತುಗಳ ತಾಣವಾಗಿ, ಹಲವು ರೋಗಗಳ ಒಂದು ಕೂಪವೇ ಆಗಿರುತ್ತದೆ. ಇಂಥ ಹೇಸಿಕೆಯ ಶರೀರವನ್ನು ಮೆಚ್ಚಿಕೊಂಡು ಏತರ ಸುಖವನ್ನು ಅನುಭವಿಸುವೆ. ಅಂಗನೆಯರು ಹೀಗಿರುವರೆಂದು ಭಾವಿಸಿ ವಿರಕ್ತರಾಗುವುದು ಒಳಿತು– ಎಂಬುದು ಚಂದಿಮರಸನ ನಿಲುವಾಗಿದೆ.

**ಭೋಗವಿರಕ್ತಿ**

ದೇಹವನ್ನು ಎಷ್ಟೇ ಕಾಳಜಿಯಿಂದ ಶುಚಿಯಾಗಿಡಬೇಕೆಂದು ಬಯಸಿದರೂ ಕೂಡಾ ಮಲಿನವಾದ ಅದರ ಅಂತರಾಳ ತನ್ನ ಮೂಲ ಗುಣವನ್ನು ಬಿಡದು. ದೇಹದ ಅಂತರಾಳದ ಅಶುಚಿಯ ಸ್ವರೂಪವನ್ನು ಚಂದಿಮರಸನ ವಚನವೊಂದು ಹೀಗೆ ನಿರೂಪಿಸುತ್ತದೆ;

*"ಎಲುವಿನ ಹಂಜರ, ಕರುಳಿನ ಜಾಳಿಗೆ*
*ಅಮೇಧ್ಯದ ಹುತ್ತ, ಮೂತ್ರದ ಬಾವಿ*
*ಶ್ಲೇಷ್ಮದ ಕೆಸರು, ಕೀವಿನ ಸೋನೆ*
*ನೆತ್ತರ ಮಡು, ನಾಡಿಗಳ ಸುತ್ತುವಳ್ಳಿ*
*ನರವಿನ ನೇಣ ಜಂತ್ರ, ಮಾಂಸದ ಘಟ್ಟಿಯ ತೆಪ್ಪ,*
*ಕಿಸುಕುಳದ ಹೇಸಿಕೆ, ಅತಿಹೇಯ ಮಲಿನ*
*ಅಸ್ಥಿರೋಮ ತೊಗಲ ಪಾಕುಳ*
*ಕ್ರಿಮಿಯ ಸಂಕುಳ, ಬಲಿದಪರ ರೇತೋ, ರಜಸ್ಸಿನಲ್ಲಿ ಜನಿತ,*
*ಉತ್ಪತ್ತಿ–ಸ್ಥಿತಿ–ಲಯದ ಬೀಜ,*
*ಆದಿ ವ್ಯಾಧಿಯ ತವರುಮನೆ,*
*ವಿಷಯದ ಭವದುಃಖದಾಗರ, ಮೋಹದ ಬಲೆ*
*ತೋರಿ ಕೆಡುವ ತನು.*
*ಇದ ನೀನೆಂದು ನಿನ್ನದೆಂದು ಮಾಡಬಾರದ ಪಾಪಂಗಳ ಮಾಡಿ,*
*ಬಾರದ ಭವಂಗಳಲ್ಲಿ ಬಂದು, ದೇಹದಿಚ್ಛೆಗೆ ಸಂದು,*
*ಹೂಸಿ ಮೆತ್ತಿ ಹೊದಿಸಿದ ದೇಹದಂತುವ ಕಂಡು*
*ಮರುಗುವೆ ಮರುಳಮಾನವಾ!*
*ಘೋರ ನರಕದಲ್ಲಿಕ್ಕುವಾಗ*
*ಅಡ್ಡ ಬಪ್ಪವರಾರು ಹೇಳಾ?*
*ಅಹಂಮಮತೆಯ ಮರದು, ದೇಹದಿಚ್ಛೆಯ ಬಿಟ್ಟು*
*ಸೋಹಂ ಬ್ರಹ್ಮಾಸ್ಮಿ ಒಂದು ಕೇಡಿಲ್ಲದ ಸುಖವ*
*ಮಾಡಿಕೋ ಮರುಳೇ.*
*ಮೋಹ ಬೇಡ! ಕೆಡುವೆ!*
*ನಿನ್ನಲ್ಲಿ ನೀನೇ ತಿಳಿದು ನೋಡಾ!*
*ಸಿಮ್ಮಲಿಗೆಯ ಚೆನ್ನರಾಯ"*[28]

ಹೀಗೆ ಹಲವಂದದ ಬಗೆಯಿಂದ ಅಶುಚಿಯಾದ ದೇಹವನ್ನು 'ನಾನು', 'ನನ್ನದು' ಎಂದು ಮೆಚ್ಚಿಕೊಂಡು ದೇಹದ ಸಂಪ್ರೀತಿ–ಸಂತೃಪ್ತಿಗಳಿಗಾಗಿ ಏನೆಲ್ಲ ಭೋಗಲಾಲಸೆಯನ್ನು ಹೊಂದುವುದು ಪ್ರಯೋಜನಕರವಾದುದಲ್ಲ. ಭಾಗ್ಯವೆಂದು ಹುಸಿಯಾಗಿ ತಿಳಿದುಕೊಂಡು ಬಯಸಿ ಅನುಭವಿಸುವ ಭೋಗವು ಪಾಪದ ಕೂಪ. ಇದರಿಂದ ಕರ್ಮವು ಹೆಚ್ಚಾಗಿ ಬಾರದ ಭವಂಗಳಲ್ಲಿ ಹುಟ್ಟಿ ಬರಬೇಕಾಗುತ್ತದೆ. ಮರುಳತನವನ್ನು ಬಿಟ್ಟು, ಇದನ್ನು ಚೆನ್ನಾಗಿ ಅರಿತುಕೊಂಡು ದೇಹದಿಚ್ಛೆಯಾದ ಭೋಗದಿಂದ ವಿರಕ್ತಿ ಹೊಂದಿ, ಶಿವಸುಖವನ್ನು ಪಡೆಯುವತ್ತ ಮನಸ್ಸು ಹರಿಸಬೇಕೆಂಬುದು ಶರಣ ಚಂದಿಮರಸನ ತಾತ್ವಿಕ ಅಭಿಪ್ರಾಯವಾಗಿದೆ. ಚಂದಿಮರಸನ ಈ ವಚನವು ಅಕ್ಕಮಹಾದೇವಿ ಮುಂತಾದ ಬಸವಯುಗದ ಕೆಲವು ವಚನಕಾರರ ವಚನಗಳಲ್ಲಿ ಅಲ್ಪಸ್ವಲ್ಪ ರೂಪಾಂತರಗೊಂಡು ಬಳಕೆಯಾಗಿರುವುದನ್ನು ಕಾಣಬಹುದಾಗಿದೆ.

**ಗುರುವಿನ ಸ್ವರೂಪ ಮತ್ತು ಗುರು–ಶಿಷ್ಯ ಸಂಬಂಧ:**

'ಗುರು' ಬೆಳೆದು ನಿಂತ ಫಲವಾದರೆ, ಶಿಷ್ಯ ಬೆಳೆಯುತ್ತಿರುವ ಸಸಿ. ಆದುದರಿಂದ ಗುರುವಿನ ವ್ಯಕ್ತಿತ್ವ–ಜ್ಞಾನ–ತೇಜಸ್ಸುಗಳು ಶಿಷ್ಯನನ್ನು ಉದ್ಧರಿಸುತ್ತವೆ. ಆತ್ಮಸಾಕ್ಷಾತ್ಕಾರಕ್ಕೆ ಅಂಥ ಗುರುವಿನ ಮಾರ್ಗದರ್ಶನ ಅತ್ಯವಶ್ಯವಾಗಿ ಬೇಕು. ಅದಕ್ಕೂ ಮುನ್ನ ಗುರುವನ್ನು ಅರಸುವ ಶಿಷ್ಯನು ಭಕ್ತಿಗೆ ಯೋಗ್ಯವಾದ ಶಿಸ್ತನ್ನು ಹೊಂದಿರಬೇಕಾದುದು ಮುಖ್ಯವಾಗಿದೆ. ಶಿಷ್ಯನ ಆ ಶಿಸ್ತಿನ ಸ್ವರೂಪವನ್ನು ಕುರಿತು ಚಂದಿಮರಸನ ವಚನವೊಂದು ಹೀಗೆ ನಿರೂಪಿಸುತ್ತದೆ;

***"ತನ್ನ ತನ್ನಿಂದವೆ ತಿಳಿದು ನೋಡೆಲವೊ!***
***ತನ್ನ ತನ್ನಿಂದವೆ ಆನೆನ್ನದೆ, ಎನ್ನದೆನ್ನದೆ***
***ಅನ್ಯ ವಿಷಯಕ್ಕೆರಗದೆ ತನ್ನ ನಿಜಸುಖದಲ್ಲಿ ನಿಂದಂದು ತಾನೆ***
***ಸಿಮ್ಮಲಿಗೆಯ ಚೆನ್ನರಾಮಾ."[29]***

ಇಲ್ಲಿ ಶಿಷ್ಯನಾದವನು 'ನಾನು', 'ನನ್ನದು' ಎಂಬ ಭಾವದಿಂದ ವಿರಕ್ತಿ ಹೊಂದಿ, ಅರಿಷಡ್ವರ್ಗಗಳಿಂದ ಪ್ರಚೋದಿತನಾಗಿ ಅನ್ಯವಿಷಯಕ್ಕೆರಗದೆ, ತನ್ನ ನಿಜಸುಖದಲ್ಲಿ ತಾನು ನಿಲ್ಲುವಂಥ ಮನೋಸ್ಥಿಮಿತತೆಯನ್ನು ಹೊಂದಿರಬೇಕೆಂಬುದು ಈ ವಚನದ ಭಾವವಾಗಿದೆ. ಇಂಥಹ ಮನಃಸ್ಥಿತಿಯನ್ನು ಸಂಪಾದಿಸಿದ ಮಾತ್ರಕ್ಕೆ ಸಾಲದು; ಜೊತೆಗೆ ಗುರುಕೃಪೆ ಅವಶ್ಯವಾಗಿ ಬೇಕು– ಎಂಬುದನ್ನು ಚಂದಿಮರಸನ ವಚನವು ವಿವರಿಸುತ್ತದೆ. ಅಂತೆಯೇ–

***"ತನ್ನ ತನ್ನಿಂದ ತಿಳಿಯದು ನೋಡಯ್ಯಾ.***
***ತನ್ನ ತಾ ಗುರುಕೃಪೆಯಿಂದ ಕಾಣಲೊಡನೆ***
***ಅನ್ಯ ವಿಷಯಕ್ಕೆರಗದೆ, ತನ್ನ ನಿಜಸುಖದಲ್ಲಿ ನಿಂದನಿಲುವು ತಾನೇ,***
***ಸಿಮ್ಮಲಗಿಯ ಚೆನ್ನರಾಮಾ."[30]***

ಎಂಬ ವಚನವು ಶಿಷ್ಯನಿಗೆ ಕೃಪೆಯನ್ನು ನೀಡುವ ಗುರುವಿನ ವ್ಯಕ್ತಿತ್ವ ಹೇಗಿರಬೇಕು? ಎಂಬುದನ್ನು ತಿಳಿಸುತ್ತದೆ.

***"ತನ್ನದಾದಡೇನೋ ಕನ್ನಡಿ ಅನ್ಯರದಾದಡೆನೋ ಕನ್ನಡಿ?***
***ತನ್ನ ರೂಪ ಕಂಡಡೆ ಸಾಲದೆ?***
***ಸದ್ಗುರು ಆವನಾದಡೇನೋ?***
***ತನ್ನನರುಹಿಸಿದಡೆ ಸಾಲದೆ***
***ಸಿಮ್ಮಲಿಗೆಯ ಚೆನ್ನರಾಮಾ."[31]***

ಎಂಬ ವಚನದಲ್ಲಿ ಶಿಷ್ಯನಿಗೆ ಅವನ ಆತ್ಮದ ಅರಿವನ್ನು ಗುರು ತನ್ನ ಜ್ಞಾನವೆಂಬ ಕನ್ನಡಿಯಲ್ಲಿ ನಿಜರೂಪದಿಂದ ತೋರಿಸುವ ಭವ್ಯಜೀವಿಯಾಗಿರಬೇಕು. ಇದನ್ನೇ ಚಂದಿಮರಸನು ಕನ್ನಡಿಯ ಪ್ರತಿಮೆಯನ್ನು ಬಳಸಿ ಸುಲಭ ಮತ್ತು ಸುಂದರವಾಗಿ ಅಭಿವ್ಯಕ್ತಿಸಿದ್ದಾನೆ.

**ಉಪಸಂಹಾರ**

ಒಟ್ಟಿನಲ್ಲಿ ಚಂದಿಮರಸನ ವಚನಗಳು ವೀರಶೈವಧರ್ಮದ ತತ್ವಾದರ್ಶ–ದರ್ಶನಗಳನ್ನು ಅಭಿವ್ಯಕ್ತಿಸುತ್ತವೆ. ಇವು ಸಾಹಿತ್ಯಾತ್ಮಕವಾಗಿ ಸುಂದರವಾದ ಉಪಮೆ–ರೂಪಕ–ಪ್ರತಿಮೆಗಳನ್ನು ಯಥೇಚ್ಛವಾಗಿ ಹೊಂದಿವೆ. ಇಲ್ಲಿನ ಭಾಷೆಯ ಬಳಕೆ ಮತ್ತು ಭಾವದ ತೀಕ್ಷ್ಣತೆಗಳು ಸಹೃದಯರ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಗಿವೆಯೆಂದು ಹೇಳಬಹುದಾಗಿದೆ.

**ಕೊನೆಟಿಪ್ಪಣಿಗಳು**

1. ವಿದ್ಯಾಶಂಕರ. ಎಸ್. ಮತ್ತು ಶಿವಣ್ಣ. ಎಸ್. (ಸಂ.). (1978). ಕೆಂಭಾವಿ ಭೋಗಣ್ಣ ಸಾಂಗತ್ಯ.
2. ಮೇಲಿನದೇ, ಪು.77–79
3. ನಾಗಭೂಷಣ ಸಿ. (1996). ಕೆಂಭಾವಿ ಬೋಗಣ್ಣ.
4. ಶಾಂತರಸ. (1972). ಬಸವಪೂರ್ವಯುಗದ ಶರಣರು. ಪು.87–93.
5. ನರಸಿಂಹಾಚಾರ್ಯ. ಆರ್. (1972). ಕರ್ನಾಟಕ ಕವಿಚರಿತೆ ಭಾಗ–1, ಪು.209–210 ಮತ್ತು ಅನುಬಂಧ–1, ಪು.90–91.
6. ಜ.ಚ.ನಿ. (1976). ವೀರಶೈವ ಸಾಹಿತ್ಯ ಸಮೀಕ್ಷೆ. ಪು.32.
7. ಶಾಮರಾಯ. ತ.ಸು. (1967). ಶಿವಶರಣರ ಕಥಾರತ್ನಕೋಶ. ಪು.135.
8. ಜ.ಚ.ನಿ. (1976). ವೀರಶೈವ ಸಾಹಿತ್ಯ ಸಮೀಕ್ಷೆ. ಪು.32.
9. ನರಸಿಂಹಾಚಾರ್ಯ. ಆರ್. (1972). ಕರ್ನಾಟಕ ಕವಿಚರಿತೆ ಭಾಗ–1, ಪು.209–210.

10. ಮೇಲಿನದೇ, ಪು.90–91.
11. ಜ.ಚ.ನಿ. (1976). ವೀರಶೈವ ಸಾಹಿತ್ಯ ಸಮೀಕ್ಷೆ. ಪು.32.
12. ಗೋಗಿ ಹನುಮಾಕ್ಷಿ (ಸಂ.). (1995). ಸುರಪುರ ತಾಲೂಕಿನ ಶಾಸನಗಳು. ಪು.68–72.
13. ಮೇಲಿನದೇ, ಪು.68–72, 1995.
14. ಮೇಲಿನದೇ, ಪು.69, 1995.
15. ಗೋಗಿ ಹನುಮಾಕ್ಷಿ (ಸಂ.). (1996). ಕಲಬುರ್ಗಿ ಜಿಲ್ಲೆಯ ಶಾಸನಗಳು. ಪು.362.
16. ಮೇಲಿನದೇ, ಪು.346.
17. ಮೇಲಿನದೇ, ಪು.427.
18. ಮೇಲಿನದೇ, ಪು.19.
19. ಮೇಲಿನದೇ, ಪು.19.
20. ಮೇಲಿನದೇ, ಪು.346.
21. ಮೇಲಿನದೇ, ಪು.362.
22. ಮೇಲಿನದೇ, ಪು.427.
23. ಗೋಗಿ ಹನುಮಾಕ್ಷಿ (ಸಂ.). (1995). ಸುರಪುರ ತಾಲೂಕಿನ ಶಾಸನಗಳು. ಪು.93.
24. ವಿದ್ಯಾಶಂಕರ. ಎಸ್. (ಸಂ.). (1993). ಸಮಗ್ರ ವಚನ ಸಂಪುಟ–7, ಪು.188–238.
25. ಮೇಲಿನದೇ, ಪು.193–194.
26. ಮೇಲಿನದೇ, ಪು.200.
27. ಮೇಲಿನದೇ, ಪು.195.
28. ಮೇಲಿನದೇ, ಪು.195–196.
29. ಮೇಲಿನದೇ, ಪು.206.
30. ಮೇಲಿನದೇ, ಪು.206.
31. ಮೇಲಿನದೇ, ಪು.206.

**ಪರಾಮರ್ಶನ ಗ್ರಂಥಗಳು:**


- ಹನುಮಾಕ್ಷಿ ಗೋಗಿ (ಸಂ.). (1996). ಸುರಪುರ ತಾಲೂಕಿನ ಶಾಸನಗಳು. ಮಹಿಳಾ ಸಾಹಿತ್ಯಿಕಾ, ಹುಬ್ಬಳ್ಳಿ.
- ಕಲಬುರ್ಗಿ ಎಂ.ಎಂ. (ಸಂ.). (1999). ಹರಿಹರನ ರಗಳೆಗಳು. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

- ನಾಗಭೂಷಣ ಸಿ. (1996). ಕೆಂಭಾವಿ ಭೋಗಣ್ಣ, ಗುಲಬರ್ಗಾ ವಿ.ವಿ., ಗುಲಬರ್ಗಾ.
- ಶಿ.ಶಿ.ಬಸವನಾಳ (ಸಂ.). (1934). ಚನ್ನಬಸವ ಪುರಾಣ. ಲಿಂಗಾಯತ ವಿದ್ಯಭಿವೃದ್ಧಿ ಸಂಸ್ಥೆ, ಧಾರವಾಡ.
- ವಿದ್ಯಾಶಂಕರ ಎಸ್. (ಸಂ.). (1989). ಚಂದಿಮರಸನ ವಚನಗಳು. ಬಸವ ಸಮಿತಿ, ಬೆಂಗಳೂರು.
- ವಿದ್ಯಾಶಂಕತ ಎಸ್. ಮತ್ತು ಎಸ್. ಶಿವಣ್ಣ (ಸಂ.). (1978). ಕೆಂಭಾವಿ ಭೋಗಣ್ಣನ ಸಾಂಗತ್ಯ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.